**<u>ಸಿವಿಲ್ ನ್ಯಾಯಾಧೀಶರು ಮತ್ತು ಅಧಿಕ ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ, ತರೀಕೆರೆ</u>**

**<u>ಕ್ರಿಮಿನಲ್ ಮೊಖದ್ದಮೆ ಸಂಖ್ಯೆ:4/2018</u>**

**<u>ಫಿರ್ಯಾದಿ:</u>** ರಾಜ್ಯದ ಪರ ಅಜ್ಜಂಪುರ ಆರಕ್ಷಕರು

**ವಿರುದ್ಧ**

**<u>ಆರೋಪಿಗಳು:</u>** 1. ಗಿರೀಶ ಬಿನ್ ಗುರುಸಿದ್ಧಪ್ಪ,,
24 ವರ್ಷ.

2. ಸಿದ್ಧರಾಮಪ್ಪ ಬಿನ್ ಸಿದ್ದಪ್ಪ,
55 ವರ್ಷ.

3. ಬಸವರಾಜಪ್ಪ ಬಿನ್ ರಾಮಪ್ಪ,
50 ವರ್ಷ.

ಎಲ್ಲರ ವಾಸಃ ಸೊಲ್ಲಾಪುರ ಗ್ರಾಮ,
ತರೀಕೆರೆ ತಾಲ್ಲೂಕು.

**<u>ದೋಷಾರೋಪಣೆ</u>**

ಶ್ರೀಮತಿ ಪವಿತ್ರ.ಎಂ.ಡಿ ಬಿ.ಎ. ಎಲ್.ಎಲ್.ಬಿ, ಸಿವಿಲ್ ನ್ಯಾಯಾಧೀಶರು ಮತ್ತು ಅ.ಪ್ರ.ದ.ನ್ಯಾ.ದಂ., ತರೀಕೆರೆ ಆದ ನಾನು ನಿಮ್ಮಗಳ ವಿರುದ್ಧ ಮಾಡುವ ದೋಷಾರೋಪಣೆಗಳು ಏನೆಂದರೆಃ-

ದಿನಾಂಕ 05.07.2016 ರಂದು ಬೆಳಗ್ಗೆ 9-00 ರ ಸಮಯದಲ್ಲಿ ಅಜ್ಜಂಪುರ ಪೊಲೀಸ್ ಠಾಣಾ ಸರಹದ್ದಿನ ಸೊಲ್ಲಾಪುರದ ಸರ್ವೆ ನಂ.20/3 ರಲ್ಲಿರುವ ಜಮೀನಿಗೆ ನಿಮ್ಮ ಪೈಕಿ ಎಲ್ಲಾ ಆರೋಪಿತರು ಪಿರ್ಯಾದಿಯ ಅನುಭವದಲ್ಲಿರುವ ಜಮೀನನ್ನು ಬೇಸಾಯ ಮಾಡಲು ಎತ್ತುಗಳನ್ನು ಹೊಡೆದುಕೊಂಡು ಬಂದಾಗ ಚಾಸಾ.1 ಮತ್ತು 2 ರವರುಗಳು ನಿಮ್ಮಗಳಿಗೆ ಕೇಳಿದ್ದಕ್ಕೆ, ಆರೋಪಿತರುಗಳಾದ ನೀವುಗಳೆಲ್ಲರೂ ಸಮಾನ ಉದ್ದೇಶದಿಂದ ಚಾಸಾ.1 ಮತ್ತು 2 ರವರಿಗೆ ಸೂಳೆಮುಂಡೇರಾ ಲೌಡಿ ನಿಮ್ಮಪ್ಪನ ಜಮೀನು ಏಕೆ ಇಲ್ಲಿಗೆ ಬಂದಿದ್ದೀರೆಂದು ಆವಾಚ್ಯ ಶಬ್ಧಗಳಿಂದ ಬೈದಿದ್ದು, ಇದರಿಂದ ನೀವು ಭಾರತೀಯ ದಂಡ ಸಂಹಿತೆ ಕಲಂ 504 ಸಹವಾಚಕ ಕಲಂ 34 ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ.

ಎರಡನೇಯದಾಗಿ, ಅದೇ ದಿನ, ಅದೇ ಸ್ಥಳ ಮತ್ತು ಅದೇ ಸಮಯದಲ್ಲಿ ಆರೋಪಿಗಳಾದ ನೀವು ಸಮಾನ ಉದ್ದೇಶದಿಂದ ಮುಂದುವರೆದು, ನಿಮ್ಮ ಪೈಕಿ *1* ನೇ ಆರೋಪಿ ಚಾಸಾ.*1* ರವರನ್ನು ಹಿಡಿದು ಎಳೆದಾಡಿ ಅವರ ಮೈಮೇಲೆದ್ದ ಬಟ್ಟೆಯನ್ನು ಹರಿದು ಅವರಿಗೆ ಅವಮಾನವನ್ನುಂಟು ಮಾಡಿದ್ದು, ಇದರಿಂದ ನೀವು ಭಾರತೀಯ ದಂಡ ಸಂಹಿತೆ ಕಲಂ *354(ಬಿ)* ಸಹವಾಚಕ ಕಲಂ *34* ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ.

ಮೂರನೇಯದಾಗಿ, ಅದೇ ದಿನ, ಅದೇ ಸ್ಥಳ ಮತ್ತು ಅದೇ ಸಮಯದಲ್ಲಿ ಆರೋಪಿಗಳಾದ ನೀವು ಸಮಾನ ಉದ್ದೇಶದಿಂದ ಮುಂದುವರೆದು, ನಿಮ್ಮ ಪೈಕಿ *3* ನೇ ಆರೋಪಿ ಕೈಯಿಂದ ಚಾಸಾ.*2* ರವರಿಗೆ ಹೊಡೆದಿದ್ದು, ಇದರಿಂದ ನೀವು ಭಾರತೀಯ ದಂಡ ಸಂಹಿತೆ ಕಲಂ *323* ಸಹವಾಚಕ ಕಲಂ *34* ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ.

ಕೊನೆಯದಾಗಿ, ಅದೇ ದಿನ, ಅದೇ ಸ್ಥಳ ಮತ್ತು ಅದೇ ಸಮಯದಲ್ಲಿ ಆರೋಪಿಗಳಾದ ನೀವು ಸಮಾನ ಉದ್ದೇಶದಿಂದ ಮುಂದುವರೆದು, ನಿಮ್ಮ ಪೈಕಿ *2* ನೇ ಆರೋಪಿ ಚಾಸಾ.*2* ರವರಿಗೆ ಸೂಳೇಮುಂಡೆ ಇವಳಿಗೆ ಬಿಡಬಾರದು, ಇವಳಿಗೆ ಯಾರು ಮದುವೆಯಾಗಬಾರದೆಂದು ಕೂಗಾಡಿ ಕೊಲೆ ಬೆದರಿಕೆ ಹಾಕಿದ್ದು, ಇದರಿಂದ ನೀವು ಭಾರತೀಯ ದಂಡ ಸಂಹಿತೆ ಕಲಂ *506* ಸಹವಾಚಕ ಕಲಂ *34* ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ.

ನೀವು ಸದರಿ ಆರೋಪಗಳ ಮೇಲೆ ಈ ನ್ಯಾಯಾಲಯದಿಂದ ವಿಚಾರಣೆಗೆ ಗುರಿಯಾಗತಕ್ಕದೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ.

ದಿನಾಂಕಃ *31* ನೇ ಅಕ್ಟೋಬರ್ *2018*

ಸಹಿ/-

***(ಪವಿತ್ರ.ಎಂ.ಡಿ)***

***ಸಿವಿಲ್ ನ್ಯಾಯಾಧೀಶರು ಮತ್ತು ಅಪ್ರದನ್ಯಾದಂ,***

***ತರೀಕೆರೆ.***